ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2460

ಉತ್ತರಿಸಬೇಕಾದ ದಿನಾಂಕ : 23.03.2022

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ	ರೈತರು ದಿನನಿತ್ಯ ಜಾನುವಾರುಗಳಿಗೆ ನೀಡುವಂತಹ ಮೇವು, ಹಿಂಡಿ, ಬೂಸ, ಜೋಳದ ಹಿಟ್ಟು, ಕಡಲೆಹೊಟ್ಟು ಇತ್ಯಾದಿಗಳ ಬೆಲೆ ಗಗನಕ್ಕೇರಿದ್ದು, ದನ ಕರುಗಳನ್ನು ಹೊಂದಿರುವ ರೈತಾಪಿ ವರ್ಗ ಈ ಪದಾರ್ಥಗಳನ್ನು ಕೊಳ್ಳಲು ಪರದಾಡಬೇಕಾದ ಸ್ಥಿತಿ ಒದಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರೈತಾಪಿ ವರ್ಗಕ್ಕೆ ಜಾನುವಾರುಗಳ ಆಹಾರ ಖರೀದಿಸಲು ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ; (ವಿವರ ನೀಡುವುದು)	ಬಂದಿರುತ್ತದೆ. ರೈತಾಪಿ ವರ್ಗಕ್ಕೆ ಜಾನುವಾರುಗಳ ಆಹಾರ ಖರೀದಿಸಲು ಯಾವುದೇ ಯೋಜನೆಗಳನ್ನು ಸರ್ಕಾರದಿಂದ ರೂಪಿಸಿರುವುದಿಲ್ಲ.
ಆ	ಇತ್ತೀಚಿನ ದಿನಗಳಲ್ಲಿ ಜಾನುವಾರುಗಳ ಬೆಲೆ ಬಹಳ ಹೆಚ್ಚಳವಾಗಿದ್ದು, ಒಂದು ವೇಳೆ ಯಾವುದಾರೂ ಖಾಯಿಲೆಗಳಿಂದ ಜಾನುವಾರುಗಳು ಮರಣ ಹೊಂದಿದರೆ ಜಾನುವಾರುಗಳನ್ನು ಮತ್ತೆ ಖರೀದಿಸಲು ರೈತರು ಸಾಲ ಮಾಡಬೇಕಾದ ದುಸ್ಥಿತಿಯಲ್ಲಿದ್ದು, ಇಂತಹ ರೈತಾಪಿ ವರ್ಗ ಜಾನುವಾರುಗಳನ್ನು ಖರೀದಿಸಲು ಸಹಾಯಧನ ನೀಡುವ ಯಾವುದಾದರೂ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ; (ವಿವರ ನೀಡುವುದು)	ಜಾನುವಾರುಗಳು ಮರಣ ಹೊಂದಿದ ಸಂದರ್ಭದಲ್ಲಿ ರೈತಾಪಿ ವರ್ಗದವರು ಜಾನುವಾರುಗಳನ್ನು ಖರೀದಿಸಲು, ಸಹಾಯಧನ ನೀಡುವ ಯಾವುದೇ ಯೋಜನೆಗಳು ಜಾರಿಯಲ್ಲಿರುವುದಿಲ್ಲ.
ಇ	ಕರ್ನಾಟಕದಲ್ಲಿ ಜಾನುವಾರುಗಳಿಗೆ ಕಾಣಿಸಿಕೊಳ್ಳುವ ಖಾಯಿಲೆಗಳು ಯಾವುವು; ಈ ಖಾಯಿಲೆಯ ಗುಣಲಕ್ಷಣಗಳ ಬಗ್ಗೆ ರೈತರಿಗೆ ಪ್ರಚಾರ ಮಾಡಲಾಗುತ್ತಿದೆಯೇ; ರೈತರಿಗೆ ಅಗತ್ಯ ತರಬೇತಿಗಳನ್ನು ನೀಡಿದರೆ ಈ ಖಾಯಿಲೆಗಳನ್ನು ಪ್ರಾಥಮಿಕ ಹಂತದಲ್ಲಿ ಅವರೇ ಗುರುತಿಸಿ ಪ್ರಥಮ ಚಿಕಿತ್ಸೆ ನೀಡುವಂತಹ ತರಬೇತಿ ಕಾರ್ಯಾಗಾರಗಳನ್ನು ಸರ್ಕಾರದಿಂದ ಕೈಗೊಳ್ಳಲಾಗುತ್ತಿದೆಯೇ; ಹಾಗಿದ್ದಲ್ಲಿ, ಅಂತಹ ತರಬೇತಿಗಳ ವಿವರ ನೀಡುವುದು?	ಕರ್ನಾಟಕ ರಾಜ್ಯದಲ್ಲಿ ಜಾನುವಾರುಗಳಿಗೆ 1) ಕಾಲು ಬಾಯಿ ಜ್ವರ, 2) ಗಳಲೆ ರೋಗ, 3) ಕರುಳು ಬೇನೆ, 4) ನೆರಡಿ ರೋಗ, 5) ಪಿ.ಪಿ.ಆರ್, 6) ನೀಲಿ ನಾಲಿಗೆ ರೋಗ, 7) ಕುರಿ ಸಿಡುಬು, 8) ಕಂದು ರೋಗ, 9) ಚಪ್ಪೆ ರೋಗ, 10) ಚರ್ಮಗಂಟು ರೋಗ, 11) ರೇಬೀಸ್ ರೋಗ ಹಾಗೂ 12) ಕೋಳಿಗಳಲ್ಲಿ ಕೊಕ್ಕರೆ ರೋಗಗಳು ಕಾಣಿಸಿಕೊಳ್ಳುತ್ತವೆ. ಸದರಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಪ್ರತಿ ವರ್ಷ ಜಾನುವಾರುಗಳಿಗೆ ಮುಂಜಾಗ್ರತೆಯಾಗಿ ಲಸಿಕೆಗಳನ್ನು ಹಾಕಲಾಗುತ್ತಿದೆ.

		ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕುವ ಕಾರ್ಯಕ್ರಮದ ಅಂಗವಾಗಿ ಕರ ಪತ್ರಗಳು / ಭಿತ್ತಿ ಪತ್ರಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಇಲಾಖೆಯ ತರಬೇತಿ ಕೇಂದ್ರಗಳಲ್ಲಿ ರೈತರಿಗೆ / ಜಾನುವಾರು ಸಾಕಾಣಿಕೆದಾರರಿಗೆ ರೋಗ ತಹಬಂದಿ ಮತ್ತು ರೋಗಲಕ್ಷಣಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇಲಾಖೆಯಲ್ಲಿನ 16 ತರಬೇತಿ ಕೇಂದ್ರಗಳಲ್ಲಿ ರೈತರಿಗೆ ವೈಜ್ಞಾನಿಕ ಹೈನುಗಾರಿಕೆ, ಕುರಿ / ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕೆ, ಮತ್ತು ಕೋಳಿ ಸಾಕಾಣಿಕೆ, ಕುರಿತಂತೆ 2 ದಿನಗಳ ತರಬೇತಿಯನ್ನು ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ.

ಇ–ಪಸಂಮೀ 107 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು